ಸಾಯಂಕಾಲ ಆರು ಗಂಟೆಯ ಹೊತ್ತಿಗೆ ಅಕ್ಕ–ತಮ್ಮ ಹೊರಟರು. ಬೀಗರ ಮನೆಯಲ್ಲಿ ಭವ್ಯ ಸ್ವಾಗತ ಸಿಕ್ಕಿತು.

‘ಪ್ರಿಯಾ, ಮಾಧವನ ಅಕ್ಕ ಬಂದಿದ್ದಾರೆ ಬಾಮ್ಮ’ ಅವಳ ತಂದೆ ಕೂಗಿದರು.

ನಸುಗುಲಾಬಿ ಬಣ್ಣದ ಶಿಫಾನ್ ಸೀರೆಯ ನೆರಿಗೆ ಚಿಮ್ಮುತ್ತಾ ಪ್ರಿಯಾ ಬಂದಳು.

‘ಪ್ರಿಯಾ. ನಮ್ಮಕ್ಕ ಮಾಳವಿಕಾ.’

ಅವರನ್ನು ನೋಡಿ ಅವಳ ಮುಖ ಅರಳಿತು. ತಕ್ಷಣ ಮಾಳವಿಕಾ ಕಾಲಿಗೆ ಬಿದ್ದಳು.

‘ಅಕ್ಕ, ಇವರು ನಿಮ್ಮ ತಮ್ಮ ಅಂತ ಗೊತ್ತಿರಲಿಲ್ಲ. ನನಗೆ ತುಂಬಾ ಖುಷಿಯಾಗ್ತಿದೆ.’

ಮಾಳವಿಕಾ ಮಾತನಾಡದೆ ಅವಳ ತಲೆ ನೇವರಿಸಿದಳು. ಪ್ರಿಯಾಳ ತಾಯಿ ಸಿಹಿ–ಖಾರ ತಂದರು. ಮಾಳವಿಕಾ ತಿಂದ ಶಾಸ್ತ್ರ ಮಾಡಿದಳು. ನಂತರ ಅವರು ಮಾಧವನಿಗೆ ಬಟ್ಟೆ ತೆಗೆಯಲು ಹೊರಟರು. ಮಾಳವಿಕಾಗೆ ಹೋಗಲು ಮನಸ್ಸಾಗಲಿಲ್ಲ.

‘ನಿನ್ನೆ ರಾತ್ರಿ ಪ್ರಯಾಣದಿಂದ ನಿದ್ರೆ ಸರಿಯಾಗಿ ಆಗಿಲ್ಲ. ನೀವು ಹೋಗಿ ಬನ್ನಿ. ನಾನು ಕ್ಯಾಬ್ ಮಾಡಿಕೊಂಡು ಹೋಗ್ತೀನಿ’ ಎಂದಳು.

ಮಾಳವಿಕಾ ಮನೆ ತಲುಪಿದಳು. ತಾಯಿಯ ಪ್ರಶ್ನೆಗಳಿಗೆ ಉತ್ತರ ಹೇಳಿ ತನ್ನ ಕೋಣೆ ತಲುಪಿದಳು. ತಲೆ ಸಿಡಿಯುತ್ತಿತ್ತು.

‘ಅಮ್ಮ ತಲೆ ನೋಯುತ್ತಿದೆ. ಬಿಸಿಬಿಸಿ ಸ್ಟ್ರಾಂಗ್ ಕಾಫಿ ಕೊಡು.’

ಪರಿಮಳಮ್ಮ ಕಾಫಿ ತಂದು ಹೇಳಿದರು. ‘ಕಾಫಿ ಕುಡಿದು ಆರಾಮವಾಗಿ ಮಲಗು. ಗಂಡ–ಮಕ್ಕಳ ಬಗ್ಗೆ ಟೆನ್ಷನ್ ಮಾಡಿಕೊಳ್ಳಬೇಡ.’

ಅವಳು ಅರ್ಥಹೀನ ನಗುಬೀರಿ ಮಲಗಿದಳು.

‘ಅಮ್ಮ ಲೈಟ್ ಆರಿಸಿಕೊಂಡು ಹೋಗು. ನಾನು ಮಲಗ್ತೀನಿ.’

ಅವಳು ಕಣ್ಣು ಮುಚ್ಚಿದಳು. ಕಣ್ಣೆದುರಿಗೆ ಪ್ರಿಯಾಳ ಚಿತ್ರ ತೇಲಿಬಂತು. ಅವಳಿಗೆ ಪ್ರಿಯಾಳನ್ನು ಮೊದಲ ಬಾರಿ ನೋಡಿದ್ದು ನೆನಪಾಯಿತು. ಸುಮಾರು ಏಳು ವರ್ಷಗಳ ಹಿಂದೆ ಮಾಳವಿಕಾ ತಂದೆಗೆ ಹುಷಾರಿಲ್ಲವೆಂದು ತಿಳಿದೊಡನೆ ನೋಡಲು ಬಂದಿದ್ದಳು. ಶ್ಯಾಮ್, ಮಕ್ಕಳ ಜೊತೆ ಹುಬ್ಬಳ್ಳಿಯಲ್ಲಿ ಅಣ್ಣನ ಮನೆಯಲ್ಲಿದ್ದ ತಂದೆ–ತಾಯಿಯರನ್ನು ನೋಡಲು ಹೋಗಿದ್ದ. ಮಾಳವಿಕಾ ಬೆಂಗಳೂರಿನಿಂದ ಬಾಂಬೆಗೆ ಹೋಗುವ ರಾತ್ರಿ ಹತ್ತೂವರೆಯ ರೈಲು ಹತ್ತಿದ್ದಳು. ಅವಳೆದುರಿಗೆ ಒಂದು ಹದಿನಾರು ಹದಿನೇಳರ ಹರಯದ ಹುಡುಗಿ ಅಳುತ್ತಾ ಕುಳಿತಿದ್ದಳು. ಮುಖದಲ್ಲಿ ಗಾಬರಿಯಿತ್ತು. ಕಣ್ಣಿನಿಂದ ಧಾರಾಕಾರವಾಗಿ ನೀರು ಸುರಿಯುತ್ತಿತ್ತು.

‘ಯಾಕಮ್ಮಾ ಅಳ್ತಿದ್ದೀಯಾ?’

ಅವಳ ಅಳು ಹೆಚ್ಚಾಗಿತ್ತು.

ಮಾಳವಿಕಾ ತನ್ನ ಬಾಕ್ಸ್ ತೆಗೆದು ಚಪಾತಿ, ಪಲ್ಯ ಹಾಕಿಕೊಟ್ಟಿದ್ದಳು.

‘ಮೊದಲು ತಿನ್ನಮ್ಮ’ ನೀರಿನ ಬಾಟಲ್ ಅವಳ ಪಕ್ಕದಲ್ಲಿಟ್ಟು ತಾನೂ ತಿನ್ನುತ್ತಾ ಹೇಳಿದ್ದಳು. ಮಾತಿನ ನಡುವೆ ಅವಳ ಹೆಸರು ಪ್ರಿಯಾ ಎಂದು ತಿಳಿದಿತ್ತು.

ತಿನ್ನುವ ಕಾರ್ಯಕ್ರಮ ಮುಗಿದ ನಂತರ ಕೇಳಿದ್ದಳು.

‘ಬೊಂಬಾಯಿಯಲ್ಲಿ ಯಾರಿದ್ದಾರೆ? ನೀನು ಯಾಕೆ ಒಬ್ಬಳೇ ಹೊರಟಿದ್ದೀಯಾ?’

‘ಇದು ಚೆನ್ನೈಗೆ ಹೋಗಲ್ವಾ? ಬಾಂಬೆಗೆ ಹೋಗುತ್ತದಾ?’ ಅವಳು ಗಾಬರಿಯಿಂದ ಕೇಳಿದ್ದಳು.

‘ಹೌದಮ್ಮ. ಇದು ಬಾಂಬೆಗೆ ಹೋಗುವ ರೈಲು. ನೀನು ಚೆನ್ನೈಗೆ ಹೋಗಬೇಕಾಗಿತ್ತಾ?’

‘ಹುಂ. ನಾನು...’ ಮತ್ತೆ ಕಣ್ಣೀರು ಹರಿಸಿದ್ದಳು. ಅವಳ ಬಳಿ ಟಿಕೆಟ್ ಇರಲಿಲ್ಲ. ಮಾಳವಿಕಾ ಅವಳ ಫೈನ್ ತಾನೇ ಕಟ್ಟಿದ್ದಳು.

‘ಗಾಬರಿಯಾಗಬೇಡ. ನೀನು ಬಾಂಬೆಗೆ ನನ್ನ ಜೊತೆ ಬಾ. ನಿನ್ನನ್ನು ಕ್ಷೇಮವಾಗಿ ಬೆಂಗಳೂರು ತಲುಪಿಸುವ ಜವಾಬ್ದಾರಿ ನನ್ನದು.’



ಮಾಳವಿಕಾ ಮನೆಯಲ್ಲಿ ಯಾರೂ ಇಲ್ಲದಿರುವುದು ನೋಡಿ ಅವಳಿಗೆ ಸಮಾಧಾನವಾಗಿತ್ತು. ನಿಧಾನವಾಗಿ ತನ್ನ ಕಥೆ ಹೇಳಿದ್ದಳು.

‘ನಾನು ಸೆಕೆಂಡ್ ಪಿ.ಯು.ಸಿ. ಓದ್ತಾ ಇದ್ದೀನಿ. ನನಗೆ ಇಂಜಿನಿಯರ್ ಆಗಬೇಕೂಂತ ಇಷ್ಟ. ನನಗೆ ನಮ್ಮ ಗ್ರೂಪ್‌ನಲ್ಲಿ ಸಂತೋಷ್‌ನ ಕಂಡರೆ ಇಷ್ಟವಿತ್ತು. ಅವನಿಗೂ ನಾನೆಂದರೆ ಇಷ್ಟ. ನಾವಿಬ್ಬರೇ ಎಲ್ಲಿಗಾದರೂ ಹೋಗಿ ಬರೋಣ. ಮನೆಯಲ್ಲಿ ಕಾಲೇಜ್‌ನಿಂದ ಟೂರ್ ಹೋಗ್ತಿದ್ದೀನಿ ಅಂತ ಹೇಳಿ ಬಾ ಅಂದ. ನಾನು ಸುಳ್ಳು ಹೇಳಿ ಬಂದೆ. ಆದರೆ ಅವನು ಬರಲೇ ಇಲ್ಲ. ನಾನು ಫೋನ್ ಮಾಡುತ್ತಲೇ ಇದ್ದೆ. ಹತ್ತೂ ಹದಿನೈದಕ್ಕೆ, ನಾನು ರೈಲಿನಲ್ಲಿದ್ದೇನೆ. ನೀನೂ ಹತ್ತು ಅಂದ. ನಾನು ಹತ್ತಲಿಲ್ಲ. ಆಗ ತಾನೇ ಬಂದು ಈ ರೈಲು ಹತ್ತಿಸಿದ. ರೈಲು ಹೊರಟರೂ ಅವನು ಬರಲಿಲ್ಲ.’

‘ಗಾಬರಿಯಾಗಬೇಡ. ನಿಮ್ಮ ಮನೆ ಫೋನ್ ನಂಬರ್ ಕೊಡು.’

‘ಮ್ಯಾಡಂ, ನೀವು ಅವರಿಗೆ ಏನೂ ಹೇಳಬೇಡಿ.’

ಮಾಳವಿಕಾ ಕಾಲ್ ಮಾಡಿ, ‘ನನ್ನ ಹೆಸರು ಮಾಳವಿಕಾ. ಇಂಜಿನಿಯರ್. ನಿಮ್ಮ ಮಗಳು ಬಾಂಬೆಯಲ್ಲಿ ನಮ್ಮ ಮನೆಯಲ್ಲಿದ್ದಾಳೆ. ಇಲ್ಲಿ ನಿಮ್ಮ ಬಂಧುಗಳು ಯಾರಾದರೂ ಇದ್ದಾರಾ?’

‘ಅವಳು ಯಾಕೆ ಬಾಂಬೆಗೆ ಬಂದಳು?’

‘ಕನ್‌ಫ್ಯೂಸ್ ಮಾಡಿಕೊಂಡು ಚೆನ್ನೈ ರೈಲು ಹತ್ತುವುದರ ಬದಲು ಬಾಂಬೆಗೆ ಹೋಗುವ ರೈಲು ಹತ್ತಿದ್ದಾಳೆ. ತುಂಬಾ ಗಾಬರಿಯಾಗಿದ್ದಾಳೆ. ನೀವು ನಿಧಾನವಾಗಿ ವಿಚಾರಿಸಿ.’

ಅವರು ತಮ್ಮ ಸ್ನೇಹಿತರ ವಿಳಾಸ ಕೊಟ್ಟಿದ್ದರು. ಮಾಳವಿಕಾ ಅವಳನ್ನು ಆ ಸ್ನೇಹಿತರ ಮನೆಗೆ ತಲುಪಿಸಿದ್ದಳು. ನಂತರ ಆ ವಿಷಯ ಮರೆತಿದ್ದಳು. ಪ್ರಿಯಾಳನ್ನು ನೋಡಿದೊಡನೆ, ‘ಆ ದಿನ ಇವಳು ಹೇಳಿದ್ದೆಲ್ಲಾ ನಿಜಾನಾ? ಇವಳು ಆ ಹುಡುಗನನ್ನು ಪ್ರೀತಿಸಿದ್ದಿರಬಹುದು. ನನಗೆ ಈ ವಿಷಯ ಗೊತ್ತಿದ್ದೂ ಮಾಧವನಿಂದ ಮುಚ್ಚಿಟ್ಟರೆ ತಪ್ಪಾಗುವುದಿಲ್ಲವೆ? ನಂತರ ಈ ವಿಷಯ ಮಾಧವನಿಗೆ ತಿಳಿದರೆ ಏನು ಮಾಡುವುದು?’

ರಾತ್ರಿ ಊಟವಾಯಿತು. ಅಕ್ಕ ತಮ್ಮ ಹರಟುತ್ತಾ ಕುಳಿತರು.

‘ಮಾಧವ ಪ್ರಿಯಾಳ ಯಾವ ಗುಣ ನಿನಗೆ ಇಷ್ಟವಾಯಿತು?’

‘ಅವಳನ್ನು ಸಂಪೂರ್ಣ ಅರ್ಥಮಾಡಿಕೊಳ್ಳುವಷ್ಟು ಅವಕಾಶ ನನಗೆ ಸಿಕ್ಕಿಲ್ಲ. ಆದರೆ ಒಂದು ವಿಚಾರ ನಿನಗೆ ಹೇಳಲೇಬೇಕು. ನಾನು ಅಮ್ಮ ಅಪ್ಪ ಹುಡುಗಿಯನ್ನು ನೋಡಿ ಬಂದಿದ್ದೆವು. ಅಮ್ಮ ಎರಡು ದಿನದಲ್ಲಿ ತಿಳಿಸ್ತೀವಿ ಅಂದಿದ್ದಳು. ನನಗೆ ಪ್ರಿಯಾ ಜೊತೆ ಮಾತಾಡಬೇಕೆನ್ನಿಸಿತ್ತು. ಆದರೆ ಅವಳು ಇಷ್ಟಪಡಲಿಲ್ಲ. ನಿಮ್ಮ ಫೋನ್ ನಂಬರ್ ಕೊಡಿ. ನಾನೇ ಕಾಲ್ ಮಾಡ್ತೀನಿ ಅಂದಳು. ಮರುದಿನ ನಾನು ಮನೆಗೆ ಹೊರಟಾಗ ಅವಳ ಕಾಲ್ ಬಂತು: ನಾನು ನಿಮ್ಮ ಹತ್ತಿರ ಮಾತಾಡಬೇಕು. ನಾನು ನಿಮ್ಮ ಮನೆಯ ಹತ್ತಿರವಿರುವ ಹೋಟೆಲ್ ದಶರಥ್ ಹತ್ತಿರವಿದ್ದೇನೆ ಎಂದಳು. ಸರಿ ನಾನು ಅಲ್ಲಿಗೆ ಹೋದೆ. ಇಬ್ಬರೂ ಹೋಟೆಲ್ ಒಳಗೆ ಹೋದೆವು. ಆಗ ಅವಳು ಹೇಳಿದಳು, ನಾನು ನನ್ನ ಹದಿನೇಳನೇ ವಯಸ್ಸಿನಲ್ಲಿ ಒಬ್ಬ ಹುಡುಗನನ್ನು ನಂಬಿ ಮನೆ ಬಿಟ್ಟು ಬಂದಿದ್ದೆ. ನನ್ನ ಅದೃಷ್ಟ ಚೆನ್ನಾಗಿತ್ತು. ಒಬ್ಬ ದೇವತೆ ನನ್ನನ್ನು ಕಾಪಾಡಿದರು ಅಂತ ಹೇಳಿದಳು.’

‘ನನ್ನ ಹೆಸರು ಹೇಳಿದಳಾ?’

‘ಇಲ್ಲಕ್ಕ. ನನಗೆ ಅವಳ ಪ್ರಾಮಾಣಿಕತೆ ತುಂಬಾ ಇಷ್ಟವಾಯಿತು. ನಾನು ಅವಳನ್ನು ಏನೂ ಕೇಳಲಿಲ್ಲ.’

‘ನಿಮ್ಮ ಮಾತಿನಲ್ಲಿ ನನಗೆ ನಂಬಿಕೆಯಿದೆ. ನಾವು ಮದುವೆಯಾಗೋಣ’ ಎಂದೆ.

‘ಈ ದಿನ ನಿನ್ನನ್ನು ನೋಡಿದ ಮೇಲೇ ಅವಳಿಗೆ ಗೊತ್ತಾಗಿದ್ದು ನಾನು ಆ ದೇವತೆಯ ತಮ್ಮ ಎಂದು. ಪ್ರಿಯಾ ಈ ವಿಚಾರ ಹೇಳದೆ ನನಗೆ ಮೋಸ ಮಾಡಬಹುದಿತ್ತಲ್ವಾ?’

ಮಾಳವಿಕಾ ತಮ್ಮನ ಭುಜ ತಟ್ಟಿದಳು. ಅವಳ ಕಣ್ಣುಗಳು ಕೊಳಗಳಾಗಿದ್ದವು. ಮನಸ್ಸು ಹಗುರವಾಗಿತ್ತು.

ಪ್ರತಿಕ್ರಿಯಿಸಿ: **feedback@sudha.co.in**